## ಮೆ|| ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ ದಂಡಾಧಿಕಾರಿಗಳು, ನರಗುಂದ

**ಸಿಸಿ ನಂ.6/2022**

**ಚಾಸಾಃ1/ಫ್ರಾಸಾಃ 2**

**ದಿನಾಂಕಃ12-08-2025**

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

| | |
|---|---|
| **ಸಾಕ್ಷಿದಾರರ ಹೆಸರು** | ನಂದೀಶ್ವರ ಕುಂಬಾರ |
| ತಂದೆ/ಗಂಡನ ಹೆಸರು | ಬಸಪ್ಪ |
| ವಯಸ್ಸು | 47 ವರ್ಷ |
| ಉದ್ಯೋಗ | ಪಿಐ, ಸಿಸಿಬಿ ಬೆಳಗಾವಿ ನಗರ |
| ವಾಸ | ಬೆಳಗಾವಿ |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದ (Through VC)**

ದಿಃ30-03-2021 ರಿಂದ ದಿಃ30-01-2022 ರವರೆಗೆ ನರಗುಂದ ಪೋಲಿಸ ಠಾಣೆಯಲ್ಲಿ ಪಿಐ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ15-11-2021 ರಂದು ಮುಂಜಾನೆ 7.00 ಗಂಟೆಯ ಸಮಯದಲ್ಲಿ ನಾನು ಠಾಣಾ ಕರ್ತವ್ಯದಲ್ಲಿದ್ದಾಗ, ನರಗುಂದ ಪಟ್ಟಣದ ಶಿವಾಜಿ ಸರ್ಕಲ ಕಡೆಯಿಂದ ಹುಣಶಿಕಟ್ಟಿ ಕಡೆಗೆ ನೀಲಿ ಬಣ್ಣದ ಲುಂಗಿ ಮತ್ತು ಬೂದು ಬಣ್ಣದ ಸ್ವೇಟರ ಧರಿಸಿದ ಒಬ್ಬ ವ್ಯಕ್ತಿಯು ಒಂದು ಚೀಲದಲ್ಲಿ ಅಕ್ರಮವಾಗಿ ಮದ್ಯದ ಪ್ಯಾಕೆಟಗಳನ್ನು ತೆಗೆದುಕೊಂಡು ನಡೆದುಕೊಂಡು ಹೋಗುತ್ತಿದ್ದಾನೆ ಎಂದು ದೂರವಾಣಿ ಮೂಲಕ ಮಾಹಿತಿ ಬಂದಿದ್ದು, ಕೂಡಲೇ ಸಿಬ್ಬಂದಿಗಳಾದ ಚಾಸಾ-4 ಮತ್ತು 5 ರವರನ್ನು ಕಚೇರಿಗೆ ಕರೆಯಿಸಿ, ಚಾಸಾ-4 ರವರಿಗೆ ಇಬ್ಬರು ಪಂಚರನ್ನು ಕರೆದುಕೊಂಡು ಬರುವಂತೆ ಸೂಚನೆ ನೀಡಿರುತ್ತೇನೆ. ಆ ಪ್ರಕಾರ ಚಾಸಾ-4 ರವರು ಪಂಚರಾದ ಚಾಸಾ-2 ಮತ್ತು 3 ರವರನ್ನು ಕರೆದುಕೊಂಡು ಬಂದು ನನ್ನ ಮುಂದೆ ಹಾಜರು ಪಡಿಸಿರುತ್ತಾರೆ. ನಂತರ ಸದರಿ ಪಂಚರಿಗೆ ಸಿಬ್ಬಂದಿಗಳಿಗೆ ಪ್ರಕರಣದ ಮಾಹಿತಿ ತಿಳಿಸಿ, ದಾಳಿಗೆ ಸಹಕರಿಸುವಂತೆ ಕೇಳಿಕೊಂಡಿದ್ದು ಪಂಚರು ಒಪ್ಪಿಕೊಂಡಿರುತ್ತಾರೆ. ನಂತರ ಚಾಸಾ-2 ರಿಂದ 5 ರವರೊಂದಿಗೆ 7-15 ಗಂಟೆಗೆ ಕಚೇರಿಯಿಂದ ಹೊರಟು ಮಾಹಿತಿ ಬಂದ ಪ್ರಕಾರ ಹುಣಶಿಕಟ್ಟಿ ರಸ್ತೆಯಲ್ಲಿರುವ oil mill ಹತ್ತಿರ ಹೋಗಿದ್ದು, ಮರೆಯಲ್ಲಿ ವಾಹನ ನಿಲ್ಲಿಸಿ ವಿಕ್ಷಣೆ ಮಾಡುತ್ತಾ ನಿಂತಿರುತ್ತೇವೆ. ಅಂದಾಜು 7.40 ಗಂಟೆಯ ಸಮಯದಲ್ಲಿ ಮಾಹಿತಿಯಲ್ಲಿ ತಿಳಿಸಿದಂತಹ ಬಟ್ಟೆಗಳನ್ನು ಧರಿಸಿರುವ ಒಬ್ಬ ವ್ಯಕ್ತಿಯು ನರಗುಂದ ಕಡೆಯಿಂದ ಹೆಗಲ ಮೇಲೆ ಚೀಲ ಹೊತ್ತಿಕೊಂಡು ನಡೆದುಕೊಂಡು ಬರುತ್ತಿರುವುದು ಕಂಡು ಬಂದಿರುತ್ತದೆ. ಕೂಡಲೇ ನಾವು ಆತನನ್ನು ಹಿಡಿದು, ಸದರಿ ಚೀಲದಲ್ಲಿರುವ ವಸ್ತುಗಳ ಬಗ್ಗೆ ವಿಚಾರಿಸಿದ್ದು ಆಗ ಸದರಿ ವ್ಯಕ್ತಿಯು ಸದರಿ ಚೀಲದಲ್ಲಿ ಮದ್ಯದ

ಪ್ಯಾಕೆಟಗಳು ಇರುವುದನ್ನು ಒಪ್ಪಿಕೊಂಡಿರುತ್ತಾನೆ. ನಂತರ ಆತನ ಹೆಸರನ್ನು ವಿಚಾರಿಸಿದಾಗ ಆತ ತನ್ನ ಹೆಸರು ಹಣಮಂತ ರಾಮದುರ್ಗ, ಸಾಃ ಜಗಾಪೂರ ಎಂದು ತಿಳಿಸಿರುತ್ತಾನೆ. ನಂತರ ಪಂಚರ ಸಮಕ್ಷಮ ಆತನಿಂದ ವಶಪಡಿಸಿಕೊಂಡ ಚೆಲವನ್ನು ಪರಿಶೀಲನೆ ಮಾಡಿದಾಗ ಅದರಲ್ಲಿ 90 ml ನ ಓರಿಜಿನಲ ಚಾಯ್ಸು ಡಿಲರ್ಸ ವಿಸ್ಕಿಯ 35 ಮಧ್ಯದ ಪ್ಯಾಕೆಟಗಳು ಇರುವುದು ಕಂಡು ಬಂದಿರುತ್ತದೆ. ಸದರಿ ಮಧ್ಯದ ಪ್ಯಾಕಟೆಗಳನ್ನು ಸಾಗಿಸಲು ಪರವಾನಿಗೆ ಪತ್ರದ ಬಗ್ಗೆ ವಿಚಾರಿಸಿದಾಗ ಯಾವುದೇ ಪರವಾನಿಗೆ ಪತ್ರ ಇಲ್ಲ ಎಂದು ಆತನು ಒಪ್ಪಿ ಕೊಂಡಿರುತ್ತಾನೆ. ಮುಂದುವರೆದು ಸದರಿ ಮಧ್ಯದ ಪ್ಯಾಕೆಟಗಳನ್ನು ಜಗಾಪೂರ ಗ್ರಾಮದಲ್ಲಿ ಸಾರ್ವಜನಿಕರಿಗೆ ಮಾರಾಟ ಮಾಡಲು ತೆಗೆದುಕೊಂಡು ಹೋಗುತ್ತಿರುವ ಬಗ್ಗೆ ಸಹ ಒಪ್ಪಿ ಕೊಂಡಿರುತ್ತಾನೆ. ನಂತರ ಸದರಿ ಎಲ್ಲ ಮಧ್ಯದ ಪ್ಯಾಕೆಟಗಳನ್ನು ಅದೇ ಚೀಲದಲ್ಲಿ ಹಾಕಿ ಬಟ್ಟೆಯಿಂದ ಸುತ್ತಿ ಸೀಲ ಮಾಡಿದ್ದು,ಅದರ ಮೇಲೆ ನನ್ನ ಮತ್ತು ಪಂಚರ ಸಹಿ ಇರುವ ಚೀಟಿ ಅಂಟಿಸಿರುತ್ತೇನೆ. ಆ ಕುರಿತು ಬೆಳಿಗ್ಗೆ 7.40 ರಿಂದ 8.40 ರವರೆಗೆ ಸ್ಥಳದಲ್ಲಿಯೇ ಪಂಚರ ಸಮಕ್ಷಮ ಜರುಗಿಸಿರುತ್ತೇನೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿಃ 1 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿಃ1(ಎ) ಎಂದು ಗುರುತಿಸಲಾಯಿತು. ನಂತರ ವಶಪಡಿಸಿಕೊಂಡ ವ್ಯಕ್ತಿ, ವಸ್ತು ಮತ್ತು ದಾಖಲೆಗಳೊಂದಿಗೆ ಕಚೇರಿಗೆ ಬಂದಿದ್ದು ದಾಳಿಯ ಕುರಿತು ಚಾಸಾ-9 ರವರಿಗೆ ಲಿಖಿತ ದೂರನ್ನು ಸಲ್ಲಿಸಿರುತ್ತೇನೆ. ಸದರಿ ದೂರನ್ನು ನಿಪಿಃ 2 ಎಂದು, ಸಾಕ್ಷಿ ಸಹಿಯನ್ನು ನಿಪಿಃ2(ಎ) ಎಂದು ಗುರುತಿಸಲಾಯಿತು. ದಾಳಿಯ ಸಮಯದಲ್ಲಿ ವಶಪಡಿಸಿಕೊಂಡ ಮುದ್ದೆ ಮಾಲುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಚೀಲದಲ್ಲಿರುವ ಮಧ್ಯದ ಪ್ಯಾಕೆಟಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾರೆಯಾಗಿ ಚೀಲದೊಂದಿಗೆ ಮು.ಮಾ. 1 ಎಂದು ಗುರುತಿಸಲಾಯಿತು. ದಾಳಿಯ ಸಮಯದಲ್ಲಿ ಬಂಧಿಸಿದ ವ್ಯಕ್ತಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿತನು ಗೈರು ಹಾಜರಾಗಿದ್ದು ಆತನನ್ನು ಗುರುತಿಸಲು ತಕರಾರು ಇಲ್ಲ ಎಂದು ಆರೋಪಿತನ ಪರ ವಕೀಲರು ತಿಳಿಸಿರುತ್ತಾರೆ.

**<u>ಪಾಟೀ ಸವಾಲುಃ ಶ್ರೀ ವಿ ಎ ಎಮ್ ಆರೋಪಿತನ ಪರ ವಕೀಲರಿಂದಃ</u>**

ದೂರನ್ನು ಗಣಕೀಕರಣ ಮಾಡಿಸಿ ಸಲ್ಲಿಸಿರುತ್ತೇನೆ . ಸದರಿ ಗಣಕೀಕರಣವನ್ನು ಠಾಣೆಯಲ್ಲಿಯೇ ಮಾಡಿಸಿರುತ್ತೇನೆ. ನಾನು ಹೇಳಿದಂತೆಯೇ ಸದರಿ ದೂರನ್ನು ತಯಾರಿಸಿದ್ದಾರೆ. ನಾನು ಹೇಳಿದಂತೆ ದೂರನ್ನು ತಯಾರಿಸಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣದ ಮಾಹಿತಿ ಬಂದಾಗ ನಾನು ಕರ್ತವ್ಯದ ಮೇಲೆ ಠಾಣಾ ಆವರಣದಲ್ಲಿ ಇದ್ದೇನು. ಠಾಣಾ ಆವರಣದಲ್ಲಿದ್ದಾಗ ಪ್ರಕರಣದ ಮಾಹಿತಿ ಬಂದಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-4 ರವರಿಗೆ ನೀಡಿದ ಸೂಚನೆ ಮೇರೆಗೆ ಸದರಿಯವರು ಪಂಚರನ್ನು ಹಾಜರು ಪಡಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. Oil mill ಹತ್ತಿರ ರಸ್ತೆಯಲ್ಲಿ ಬರುವವರಿಗೆ ಕಾಣಿಸದಂತೆ ಮರೆಯಲ್ಲಿ ವಾಹನ ನಿಲ್ಲಿಸಿದ್ದೇವು. ನಿರ್ಧಿಷ್ಟ ಸ್ಥಳ ನೆನಪಿಲ್ಲ. ಆರೋಪಿತನು ನರಗುಂದ ಕಡೆಯಿಂದ ಬರುತ್ತಿದ್ದನು. ವಾಹನವನ್ನು ಮರೆಯಲ್ಲಿ ನಿಲ್ಲಿಸಿ ವಿಕ್ಷಣೆ ಮಾಡುವಾಗ ಆರೋಪಿತನು ನರಗುಂದ ಕಡೆಯಿಂದ

ಮು.ಮಾ.ಗಳೊಂದಿಗೆ ಬಂದಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನನ್ನು ಹಿಡಿದ ಸ್ಥಳದ ಪೂರ್ವಕ್ಕೆ – oil mill ಕಟ್ಟಡ, ಪಶ್ಚಿಮಕ್ಕೆ– oil mill ಗೆ ಸಂಬಂಧಪಟ್ಟ ಖಾಲಿ ಜಾಗ, ಉತ್ತರಕ್ಕೆ – ನರಗುಂದ ರಸ್ತೆ, ದಕ್ಷಿಣಕ್ಕೆ –ಹುಣಶಿಕಟ್ಟಿ ರಸ್ತೆ ಇದೆ. ಚೆಕಬಂದಿ ಕುರಿತು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನನ್ನು ವಿಚಾರಣೆ ಮಾಡಿದಾಗ ಆತ ತನ್ನ ಹೆಸರು ಹಣಮಂತ ರಾಮದುರ್ಗ ಎಂದು ಮತ್ತು ಮು.ಮಾ.ಗಳನ್ನು ಜಗಾಪೂರ ಗ್ರಾಮದಲ್ಲಿ ಮಾರಾಟ ಮಾಡಲು ತೆಗೆದುಕೊಂಡು ಹೋಗುತ್ತಿದ್ದೇನು ಎಂದು ಒಪ್ಪಿಕೊಂಡಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚರ ಸಮಕ್ಷಮ ಆರೋಪಿತನಿಂದ ಮು.ಮಾ.ಗಳನ್ನು ವಶಪಡಿಸಿಕೊಂ ಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಸ್ಥಳದಲ್ಲಿ ಪಂಚನಾಮೆ ಜರುಗಿಸಿ ಸದರಿ ಮು.ಮಾ.ಗಳನ್ನು ಜಪ್ತು ಮಾಡಿಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎಲ್ಲ ಪ್ರಕ್ರಿಯೆಗಳು ಅಂದಾಜು 8.40 ಗಂಟೆಗೆ ಮುಕ್ತಾಯವಾಗಿರುತ್ತವೆ. ಬೆಳಿಗ್ಗೆ 9.15 ಗಂಟೆಗೆ ದೂರನ್ನು ಸಲ್ಲಿಸಿರುತ್ತೇನೆ. ಈ ಪ್ರಕರಣಕ್ಕೂ, ಆರೋಪಿತನಿಗೂ ಹಾಗೂ ಮು.ಮಾ.ಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸದರಿ ದಿನ ಆರೋಪಿತನ ವಿರುದ್ಧ ಯಾವುದೇ ದಾಳಿ ಜರುಗಿಸಿಲ್ಲ ಮತ್ತು ಆತನಿಂದ ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿತನ ವಿರುದ್ಧ ಸುಳ್ಳು ದೂರು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಅದಕ್ಕೆ ಪೂರಕವಾಗಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ .

ಜೆ ಎಂ ಎಫ್ ಸಿ ನರಗುಂದ